MYSORE LEGISLATIVE ASSEMBLY

FORTY-SEVENTH DAY.

Monday, 10th September 1962.

The House met in the Assembly Hall, Vidhana Soudha, Bangalore, at One of the Clock.

MR. SPEAKER (SRI B. VAIKUNTA BALIGA, B.A., B. L.) in the Chair.

STARRED QUESTIONS

(to which oral answers were given)

MR. SPEAKER.—Question No. 250. The Minister concerned has requested that the question might be held over because he is out of station. Hence the question is held over.

Release of Lands in S. No. 33 of the Minor Forests of Heligehalli in Magadi Taluk for establishing a Harijan Colony.

*Q.—330. SRI C. R. RANGE GOWDA (Magadi).—

Will the Government be pleased to state:—

(*a*) when the lands in S. No. 33 of the Minor Forests of Heligehalli in Magadi Taluk were released for establishing a colony for Harijans;

(*b*) whether the lands are distributed to the Harijans and the Saguvali Chit issued;

(*c*) whether all the lands were brought under cultivation by the colonists;

(*d*) the number of applications received for the grant of land in the said colony;

(*e*) out of them, the number of persons that are provided with lands?

*A.—SRI M. V. KRISHNAPPA (Minister for Revenue).—

(*a*) 25-2-1953.

(*b*) Yes.

(*c*) Yes.

(*d*) About 2,000 applications.

(*e*) 160.

ಶ್ರೀ ಸಿ. ಆರ್. ರಂಗೇಗೌಡ.—ಸಾಗುವಳಿ ಚೀಟಿ ಗಳನ್ನು ಕೊಟ್ಟಿದ್ದರೂ ಜಮೀನು ಅವರ ಸ್ವಾಧೀನಕ್ಕೆ ಬಂದಿಲ್ಲ, ಬೇರೆಯವರು ಸಾಗುವಳಿ ಮಾಡುತ್ತಿದ್ದಾರೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎಂ. ವಿ. ಕೃಷ್ಣಪ್ಪ.—ಬಂದಿದೆ, ಯಾರು ಯಾರು unanthorised ಆಗಿ ಸಾಗುವಳಿ ಮಾಡು ್ತಿದ್ದಾರೋ ಅವರನ್ನು ಬಿಡಿಸಿ evict ಮಾಡಬೇಕೆಂದು ಜಿಲ್ಲಾಧಿಕಾರಿಗಳು ಆಜ್ಞೆಮಾಡಿದ್ದಾರೆ.

ಶ್ರೀ ಸಿ. ಆರ್. ರಂಗೇಗೌಡ.—1948ನೆಯ ಇಸವಿಯಲ್ಲಿ ಸ್ಥಳೀಯ ಹರಿಜನರಿಗೆ 100 ಎಕರೆ ಜಮೀನನ್ನು ಕೊಡಬೇಕೆಂದು ಆಜ್ಞೆಯಾಗಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಎಂ. ವಿ. ಕೃಷ್ಣಪ್ಪ.—472 ಎಕರೆ ಜಮೀನು ರಿಲೀಸ್ ಆದದ್ದರಲ್ಲಿ 372 ಎಕರೆ ಮಾತ್ರ ಸಾಗುವಳಿಗೆ ಲಾಯಕ್ಕಾಗಿದೆಯೆಂದು ವರದಿ ಮಾಡಿದ್ದಾರೆ. ಅದರ ಮೇಲೆ 372 ಎಕರೆ ಮಾತ್ರ ಭೂ ಹೀನರಿಗೆ, ಮಿಲಿಟರಿಯವರಿಗೆ ಮತ್ತು ರಾಜಕೀಯದಲ್ಲಿ ನೊಂದವರಿಗೆ ಕೊಟ್ಟಿದ್ದಾರೆ.

ಶ್ರೀ ಸಿ. ಆರ್. ರಂಗೇಗೌಡ.—ಎರಡು ಸಾವಿರ ಅರ್ಜಿಗಳು ಬಂದಿವೆ, 362 ಎಕರೆ ಮಾತ್ರ ಕೊಟ್ಟಿದೆಯೆಂದು ಹೇಳುತ್ತಿದ್ದೀರಿ. ಇದನ್ನು ವ್ಯವಸಾಯಿಗಾರರಿಗೆ ಕೊಡದೆ ಪಟ್ಟಣಗಳಲ್ಲಿರುವವರಿಗೆ ಕೊಟ್ಟಿದೆಯೆಂಬುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಎಂ.ವಿ. ಕೃಷ್ಣಪ್ಪ.—Land Grant Rule ಪ್ರಕಾರ ಸ್ಥಳದವರಿಗೆ ಕೊಡಬೇಕು. ಆದರೆ ಮಿಲಿಟರಿಯವರು ಸ್ಥಳದಲ್ಲಿರುವುದಿಲ್ಲ, ಪಟ್ಟಣಗಳಲ್ಲಿರುತ್ತಾರೆ, ಇಂಥವರ ಸಂಬಂಧವಾಗಿ ರೂಲ್ಸ್ ವಿನಾಯಿತಿ ಮಾಡುತ್ತಾರೆ.

ಶ್ರೀ ಸಿ. ಆರ್. ರಂಗೇಗೌಡ.—ಸಾಗುವಳಿ ಚೀಟಿ ಕೊಟ್ಟಿರುವ ಜಮೀನು ಅವರ ಸಾಗುವಳಿಯಲ್ಲದೆಯೆಂದು ಹೇಳಿದ್ದೀರಿ, ಅದರೆ ನನಗೆ ಗೊತ್ತಿರುವ ಪ್ರಕಾರ ಹಾಗಿಲ್ಲ, ಅನ್ಯಾಯವಾಗಿದೆ. ಮುಂದಾದರೂ ಒಬ್ಬ ವಿಶೇಷಾಧಿಕಾರಿಯನ್ನು ನೇಮಿಸಿ ಸರಿಪಡಿಸಲು ಪ್ರಯತ್ನ ಮಾಡುತ್ತಿರಾ?

ಶ್ರೀ ಎಂ. ವಿ. ಕೃಷ್ಣಪ್ಪ.—ಮಾನ್ಯ ಸದಸ್ಯರ ಈ ಪ್ರಶ್ನೆ ಬಂದಮೇಲೆ ವಿಚಾರ ಮಾಡಲಾಗಿ ಜಿಲ್ಲಾಧಿಕಾರಿಗಳು ನೂಕ್ಕಕ್ರಮ ತೆಗೆದುಕೊಂಡಿದ್ದಾರೆಂದು ವರದಿ ಬಂದಿದೆ. ಸಾಗುವಳಿ ಚೀಟಿ ಯಾರಿಗೆ ಕೊಟ್ಟಿದೆಯೋ ಅವರೇ ಸಾಗುವಳಿ ಮಾಡುತ್ತಿದ್ದಾರೆಂದು ವರದಿ ಬಂದಿದೆ.

ಶ್ರೀ ಜಿ. ವಿ. ಗೌಡ.--Political sufferers ಎಷ್ಟು ಜನರಿಗೆ ಎಷ್ಟು ಜಮೀನನ್ನು ಕೊಟ್ಟಿದ್ದಾರೆ?

ಶ್ರೀ ಎಂ. ವಿ. ಕೃಷ್ಣಪ್ಪ.—ಹತ್ತು ಜನರಿಗೆ ಎರಡೆರಡು ಎಕರೆಯಂತೆ ಇಪ್ಪತ್ತು ಎಕರೆ ಕೊಟ್ಟಿದ್ದಾರೆ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಉಚಿತವಾಗಿ ಕೊಟ್ಟಿದ್ದಿರೋ, ಲೀಸ್ ಮೇಲೆ ಕೊಟ್ಟಿದ್ದಾರೋ ಅಥವಾ ಅಪ್‌ಸೆಟ್ ಬೆಲೆಗೆ ಕೊಟ್ಟಿದ್ದಾರೋ?

ಶ್ರೀ ಎಂ. ವಿ. ಕೃಷ್ಣಪ್ಪ.—Land Grant Rules ಪ್ರಕಾರ ಹರಿಜನರು ಮತ್ತು ಮಿಲಿಟರಿಯವರಿಗೆ ಉಚಿತವಾಗಿ ಕೊಡಬೇಕು; ಮಿಕ್ಕವರಿಗೆ ಅಪ್‌ಸೆಟ್ ಬೆಲೆಗೆ ಕೊಡಲಾಗಿದೆ.

ಶ್ರೀ ಎಂ. ಸಿ. ಬಸಪ್ಪ.--ಅಕ್ರಮ ಸಾಗುವಳಿ ಮಾಡುತ್ತಿರುವವರು ಭೂಹೀನರಾದರೆ ಏನು ಮಾಡುತ್ತೀರಿ?

ಶ್ರೀ ಎಂ. ವಿ. ಕೃಷ್ಣಪ್ಪ.—ಪರಿಶೀಲನೆ ಮಾಡಿ ಅವರಿಗೆ ಎಲ್ಲಾದರೂ ಕೊಡಬೇಕಾಗುತ್ತದೆ.

ಶ್ರೀ ಸಿ. ಆರ್. ರಂಗೇಗೌಡ.—ಕೆಲವರು ಆ ಜಮೀನಿನಲ್ಲಿ ತೆಂಗು, ಗೋಡಂಬಿ ಹಾಕಿಕೊಂಡಿದ್ದಾರೆ, ಅಂಥ ಸಂದರ್ಭದಲ್ಲಿ ಆ ಜಮೀನನ್ನು ಅವರಿಗೇ ಕೊಡಲು ಸಾಧ್ಯವೇ?

ಶ್ರೀ ಎಂ. ವಿ. ಕೃಷ್ಣಪ್ಪ.—ಅಂಥ ಸಂದರ್ಭಗಳಲ್ಲಿ ಅಧಿಕಾರಿಗಳು ಕನಿಕರ ತೋರಿಸಬೇಕು. ಯಾರಾದರೂ ತೆಂಗಿನ ಸೆಸಿಗಳನ್ನು ಹಾಕಿದ್ದರೆ, ಅವರಿಂದ ಜಮೀನನ್ನು ಕಿತ್ತುಕೊಂಡರೆ ಅವರಿಗೆ ನಷ್ಟವಾಗುತ್ತದೆ. ಅಂಥ ಸಂದರ್ಭಗಳಲ್ಲಿ ಅಧಿಕಾರಿಗಳು ಕನಿಕರದಿಂದ ನೋಡಬೇಕಾಗುತ್ತದೆ.

ಶ್ರೀ ಟಿ. ಮಾದಯ್ಯಗೌಡ.—ಅನೇಕರು ಜಮೀನು ತಮ್ಮ ಸ್ವಾಧೀನದಲ್ಲಿದ್ದಾಗ ಅದನ್ನು ಸಾಗುವಳಿ ಮಾಡಲು ಬೇಕಾದಷ್ಟು ಹಣ ಖರ್ಚು ಮಾಡಿರುತ್ತಾರೆ, ಅಂಥ ಸಂದರ್ಭದಲ್ಲಿ ಏನು ಮಾಡುತ್ತೀರಿ?

ಶ್ರೀ ಎಂ. ವಿ. ಕೃಷ್ಣಪ್ಪ.—ಮಾನ್ಯ ರಂಗೇಗೌಡರು ಹೇಳಿದ್ದಾರೆ, ಅನೇಕರು ತೆಂಗಿನ ಗಿಡಗಳನ್ನು ಹಾಕಿದ್ದಾರೆಂದು. ಅಂಥ ಸಂದರ್ಭಗಳಲ್ಲಿ ಏನು ಮಾಡಬೇಕೆಂದು ಯೋಚನೆ ಮಾಡುತ್ತೇವೆ.

ಶ್ರೀ ಟಿ. ಮಾದಯ್ಯಗೌಡ.—ಕೆಲವರು ಬೇರೆ ಕಡೆ ಜಮೀನಿದ್ದುದನ್ನು ಮಾರಾಟಮಾಡಿ, ಈ ಜಮೀನಿಗೆ ಸಾಗುವಳಿ ಚೀಟಿ ಪಡೆದು ಇಲ್ಲೇ ಕುಳಿತುಕೊಳ್ಳಬೇಕೆಂದಿದ್ದಾರೆ. ಅಂಥವರಿಗೆ ಜಮೀನನ್ನು ಕೊಡುತ್ತೀರಾ?

ಶ್ರೀ ಎಂ. ವಿ. ಕೃಷ್ಣಪ್ಪ.—ಮಾರಬಾದೆಂದೇನೂ ರೂಲ್ಸ್ ಇಲ್ಲ. Land Grant Rules ಪ್ರಕಾರ ಜಮೀನನ್ನು ತೆಗೆದುಕೊಂಡು ಅದನ್ನು ಮಾರಿ ಬೇರೆ ಕಡೆಯಿಂದ ಇಲ್ಲಿಗೆ ಬಂದಿದ್ದರೆ ಅದನ್ನು ಪರಿಶೀಲನೆ ಮಾಡುತ್ತೇವೆ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಅಪ್‌ಸೆಟ್ ಬೆಲೆಗೆ ಕೊಟ್ಟರೆ, ಖುಷ್ಕಿ ಜಮೀನಿಗೆಷ್ಟು, ತರಿ ಜಮೀನಿಗೆಷ್ಟು?

ಶ್ರೀ ಎಂ. ವಿ. ಕೃಷ್ಣಪ್ಪ.—ಆಯಾ ಸ್ಥಳದಲ್ಲಿ ಎಷ್ಟು ಬೆಲೆಯಿದೆಯೆಂದು ನೋಡಿ, ಎಕರೆಗೆ ನೂರು, ನೂರೈವತ್ತು ಹೀಗೆ ಬೇರೆ ಬೇರೆ ಬೆಲೆ ನಿಗದಿ ಮಾಡುತ್ತಾರೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈ ಎರಡು ಸಾವಿರ ಅರ್ಜಿಗಳು ರಿಲೀಸ್ ಮಾಡಿದ ಮೇಲೆ ಬಂದುವೋ ಅಥವಾ ಮೊದಲೇ ಬಂದುವೋ?

ಶ್ರೀ ಎಂ. ವಿ. ಕೃಷ್ಣಪ್ಪ.—ಮೊದಲು ಕೆಲವು ಬಂದುವು ಆ ಮೇಲೆ ಕೆಲವು ಬಂದುವು.

Sri C. J. MUCKANNAPPA.—My question has not been answered. If the applications were more, Government would have thought of releasing some more land. So my intention is to know how many applications were there prior to the release of the land and how many applications were recived after the release of the land.

ಶ್ರೀ ಎಂ. ವಿ. ಕೃಷ್ಣಪ್ಪ.—ಅಲ್ಲಿ ಇರುವುದು ಅಷ್ಟು ಭೂಮಿ. ಹೆಚ್ಚು ಅರ್ಜಿಗಳಿದ್ದ ಮಾತ್ರಕ್ಕೆ ಜಮೀನು ಹೆಚ್ಚಾಗುವುದಿಲ್ಲ.

ಶ್ರೀ ಸಿ. ಆರ್. ರಂಗೇಗೌಡ.—ಈ 372 ಎಕರೆಯನ್ನು ಯಾವ ಸಾಲನಲ್ಲಿ ಕೊಟ್ಟಿದ್ದಾರೆ?

ಶ್ರೀ ಎಂ. ವಿ. ಕೃಷ್ಣಪ್ಪ.—1952—53 ರಲ್ಲಿ.

ಶ್ರೀ ಸಿ. ಆರ್. ರಂಗೇಗೌಡ.—ಹಾಗೆ ಪಡೆದವರಲ್ಲಿ ಕೆಲವರು ಜಮೀನನ್ನು ಮಾರಿದ್ದಾರೆಂಬುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಎಂ. ವಿ. ಕೃಷ್ಣಪ್ಪ.—ಸರ್ಕಾರದ ಗಮನಕ್ಕೆ ಬಂದರೂ ಕೆಲವರು ಸರ್ಕಾರದ ಅಪ್ಪಣೆ ತೆಗೆದುಕೊಂಡು ಮಾರಿರುತ್ತಾರೆ.

Sanctioning of Irrigation Wells in Hosakote Taluk during 1961-62 and 1962-63.

*Q.—359. Sri B. CHANNABYRE GOWDA (Hosakote).—

Will the Government be pleased to state:—

(*a*) the number of applications received from Hosakote Taluk for sanctioning irrigation wells during the year 1961-62 and 1962-63;

(*b*) out of them, how many applicants have been granted loan and subsidy;

(*c*) whether their lands will be mortgaged for this purpose;

(*d*) whether the loans are being sanctioned in time?

A.—Sri M. V. KRISHNAPPA (Minister for Revenue).—

(*a*) (i) 1961-62 ... 153.
(ii) 1962-63 ... 33.

(*b*) (i) 57 applicants have been sanctioned loans during 1961-62.